
# ಕೈಬರಹವೂ, ವ್ಯಕ್ತಿತ್ವವೂ...

ನಾನು ಐದನೇ ತರಗತಿಗೆ ಸೇರಿದ್ದೆ. ಮೊದಲನೇ ದಿನ ಪರಸ್ಪರ ಪರಿಚಯದ ನಂತರ ನಮ್ಮ ಕೈಬರಹ ಪರೀಕ್ಷಿಸಲು ರಾಮ್ ಪ್ರಸಾದ್ ಎನ್ನುವ ಶಿಕ್ಷಕರು ಪುಟ್ಟ ಉಕ್ತ ಲೇಖನ ಬರೆಯಲು ಹೇಳಿದ್ದರು. ಅದು ಬರೆದ ನಂತರ ನೋಡಿದಾಗ, ನನ್ನಂತೆ ಹಲವಾರು ವಿದ್ಯಾರ್ಥಿಗಳ ಕೈ ಬರಹ ಚೆನ್ನಾಗಿ ಇರದಿರುವುದನ್ನು ಗಮನಿಸಿ ಎಲ್ಲರೂ ಒಂದು ಪುಟ ಆಂಗ್ಲ ಭಾಷೆಯ ಹಾಗೂ ಇನ್ನೊಂದು ಪುಟ ಕನ್ನಡ ಭಾಷೆಯ ಬರಹವನ್ನು ಕಡ್ಡಾಯವಾಗಿ ಬರೆದು ತರುವಂತೆ ತಿಳಿಸಿದ್ದರು.

ಯಾಕೆ ಹೀಗೆ ಎಂದು ಕೆಲವರು ಕೇಳುವ ಮೊದಲೇ ಅವರು, 'ಉತ್ತಮ ಕೈಬರಹ ನಿಮಗೊಂದು ಅಚ್ಚುಕಟ್ಟುತನ ಕಲಿಸುತ್ತದೆ. ಇದರಿಂದಾಗಿ ನಿಮ್ಮ ವ್ಯಕ್ತಿತ್ವಕ್ಕೂ ಮೆರುಗು ಬರುತ್ತದೆ. ಹೀಗಾಗಿ ಇದನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬನ್ನಿ' ಎಂದಿದ್ದರು. ಅವರು ಹೇಳಿದ ಪ್ರಕಾರ ನನಗೆ ಏನೇ ತೊಂದರೆ ಇದ್ದರೂ ಬಿಟ್ಟೂ ಬಿಡದೇ ಕಾಲೇಜು ಸೇರುವವರೆಗೂ ಪಾಲಿಸಿಕೊಂಡು ಬಂದಿದ್ದರಿಂದ ನನ್ನ ಕೈಬರಹ ಎಲ್ಲರಿಗೂ ಅಚ್ಚುಮೆಚ್ಚಿನದಾಯಿತು.

ನಾನು ಬರೆದುದನ್ನು ಇತರರಿಗೆ ತೋರಿಸಿದಾಗ ನನಗೆ ಹೆಮ್ಮೆ ಆಗುತ್ತಿತ್ತು. ಕೈಬರಹದೊಂದಿಗೆ ವ್ಯಕ್ತಿತ್ವವನ್ನೂ ತಿದ್ದಿತೀಡಿದ ಗುರುಗಳಿಗೆ ನಮನ.

—ಅರವಿಂದ ಜಿ. ಜೋಷಿ,
ಮೈಸೂರು



# ಆತ್ಮವಿಶ್ವಾಸ ತುಂಬಿದ ಮಾತುಗಳು

ಜೀವನದಲ್ಲಿ ಗೊಂದಲ ಎದುರಾದಾಗ, ಧೈರ್ಯ ಕಳೆದುಕೊಳ್ಳುವುದು ಸಹಜ. ಇಂತಹ ಸಂದರ್ಭಗಳಲ್ಲಿ ನಮಗೆ ಮಾರ್ಗದರ್ಶನ ನೀಡುವವರು ಬದುಕಿನ ನಿಜವಾದ ಶಿಕ್ಷಕರು. ನಾನು ಸಹ ಒಂದು ಸಂದರ್ಭದಲ್ಲಿ ಸಂಕಟಕ್ಕೊಳಗಾಗಿದ್ದೆ. ಮುಂದೆ ಹೇಗೋ ಗೊತ್ತಿಲ್ಲ ಎಂದು ಹೃದಯದಲ್ಲಿ ಭಯ ತುಂಬಿದ ಸಂದರ್ಭದಲ್ಲಿ ನನ್ನ ಗುರುಗಳಾದ ಆಶಾ ಜೋಸೆಫ್ ಅವರು ನನಗೆ ಧೈರ್ಯ ತುಂಬಿದ್ದರು.

'ಬೀಳುವುದು ಸವಾಲನ್ನು ಎದುರಿಸುವುದರ ಒಂದು ಭಾಗ. ಬಿದ್ದ ಮೇಲೂ ಎದ್ದು ನಿಂತು ಹೋರಾಡುವುದು ನಿನ್ನ ಶಕ್ತಿ' ಎಂದು ಹೇಳಿದ್ದರು. ಆಗ ಅವರ ಮಾತು ನನ್ನೊಳಗೆ ಹೊಸ ಆತ್ಮವಿಶ್ವಾಸವನ್ನು ಹುಟ್ಟಿಸಿತ್ತು.

'ಯಶಸ್ಸು ಎಂಬುದು ತಕ್ಷಣ ಸಿಗುವುದಲ್ಲ, ಪ್ರಯತ್ನ ಮತ್ತು ತಾಳ್ಮೆಯ ಫಲ' ಎಂಬುದನ್ನು ಮನದಟ್ಟು ಮಾಡಿದರು. ಕೇವಲ ಪಠ್ಯವಷ್ಟೇ ಅಲ್ಲದೆ ಜೀವನವನ್ನು ಹೇಗೆ ಎದುರಿಸಬೇಕು ಎಂಬುದನ್ನೂ ಕಲಿಸಿದರು. ಇಂದಿಗೂ ಜೀವನದಲ್ಲಿ ಸಂಕಷ್ಟ ಎದುರಾದಾಗ ಅವರ ಮಾತು ನೆನೆಸಿಕೊಳ್ಳುತ್ತೇನೆ. ಅವರ ಮಾರ್ಗದರ್ಶನ ನನ್ನ ಬದುಕಿನಲ್ಲಿ ಬೆಳಕು ಚೆಲ್ಲಿದೆ. ಇಂತಹವರು ಜೀವನದ ಶ್ರೇಷ್ಠ ಗುರುಗಳು.

—ಅನೀಶ್ ಕ್ಲೋಡ್ ಕ್ಯಾಸ್ಟಲಿನೋ, ಮಂಗಳೂರು

# ಮರಳಿ ಯತ್ನವ ಮಾಡು...

ನಾನಾಗ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಸಾ.ಶಿ. ಮರುಳಯ್ಯ, ಜಿ.ಎಸ್. ಶಿವರುದ್ರಪ್ಪ, ಕೆ.ಎಸ್. ನಿಸಾರ್ ಅಹಮದ್ ಅವರಂತಹ ಸಾಹಿತಿಗಳು ನಮ್ಮ ಉಪನ್ಯಾಸಕರಾಗಿದ್ದರು. ಅವರ ವಿದ್ಯಾರ್ಥಿನಿಯಾಗಿದ್ದ ನನ್ನಲ್ಲಿ, ಅವರೆಲ್ಲರ ಸಾಹಿತ್ಯಪ್ರೇಮವನ್ನು ನೋಡಿ ನಾನೂ ಬರೆಯಬೇಕೆಂಬ ಆಸೆಯೊಂದು ಗರಿಗೆದರಿತ್ತು.

ಪಠ್ಯಗಳ ಹೊರತಾಗಿ ಬೇರೆ ವಿಷಯಗಳ ಬಗ್ಗೆ, ಅಂದರೆ ಮಲೆನಾಡಿನ ಹಸಿರು, ಬೆಟ್ಟ ಗುಡ್ಡಗಳು, ಜಲಪಾತ, ದಟ್ಟ ಅರಣ್ಯಗಳು, ಇಲ್ಲಿನ ಜೀವವೈವಿಧ್ಯ... ಹೀಗೆ ಇಂಥವುಗಳ ಕುರಿತು ಆಗಾಗ್ಗೆ ಚಿಕ್ಕ ಟಿಪ್ಪಣಿಗಳನ್ನು ಬರೆದು ನಿಸಾರ್ ಅಹಮದ್ ಅವರ ಮುಂದೆ ಇಡುತ್ತಿದ್ದೆ.

ಒಮ್ಮೆ ನನ್ನನ್ನು ಅವರ ಸ್ಟಾಫ್ ರೂಮಿಗೆ ಕರೆದು, 'ನಿನ್ನ ಭಾಷೆ , ಶೈಲಿ ಎಲ್ಲವೂ ಚೆನ್ನಾಗಿದೆ. ನೀನು ಇನ್ನೂ ಉತ್ತಮವಾಗಿ ಬರೆಯಬಲ್ಲೆ, ಮುಂದುವರೆಸು' ಎಂದು ಹಾರೈಸಿದ್ದರು. ಅಳುಕುತ್ತಲೇ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ಪ್ರಕಟವಾಗದಿದ್ದಾಗ , ನನ್ನಿಂದ ಇದು ಸಾಧ್ಯವಿಲ್ಲವೆಂದು ಖಿನ್ನಳಾಗುತ್ತಿದ್ದೆ. ಅಂತಹ ಸಮಯಗಳಲ್ಲಿ 'ಮರಳಿ ಯತ್ನವ ಮಾಡು ಒಮ್ಮೆಲೇ ಯಶಸ್ಸು ಸಿಗುವುದಿಲ್ಲ' ಎಂದು ಸಮಾಧಾನ ಮಾಡಿ , ಹುರಿದುಂಬಿಸಿದ್ದು ಅವರೇ. ನನಗೆ ದಾರಿ ತೋರಿದ ನಮ್ಮ ಮಾಸ್ತರರ ಮಾತುಗಳನ್ನು ಈ ದಿನಕ್ಕೂ ನಾನು ಮರೆತಿಲ್ಲ, ಮರೆಯುವುದೂ ಇಲ್ಲ.

—ಪ್ರಭಾ ಪ್ರಸಾದ್

**ಬದುಕಿನ ಶಕ್ತಿದೇವತೆ:** ನವರಾತ್ರಿ ಹಬ್ಬದಲ್ಲಿ ಶಕ್ತಿರೂಪಿಣಿ ದೇವಿಯನ್ನು ಆರಾಧಿಸುತ್ತೇವೆ. ನಮ್ಮ ಬದುಕಿನಲ್ಲಿಯೂ ಮನೋಸ್ಥೈರ್ಯ ತುಂಬುವ ಒಂದು ಜೀವ ಇದ್ದೇ ಇರುತ್ತದೆ. ಜೀವನವೇ ಸಾಕೆನಿಸುವಾಗ, ಇದಿನ್ನು ನನ್ನಿಂದ ಆಗದು ಎಂದೆನಿಸಿದಾಗ ನಿಮ್ಮೊಟ್ಟಿಗೆ ನಿಂತ, ನಿಮ್ಮಲ್ಲಿ ಧೈರ್ಯ ತುಂಬಿದ, ನಿಮ್ಮ ಬದುಕಿನ ಶಕ್ತಿರೂಪಿಣಿಯ ಬಗ್ಗೆ ಬರೆದು ಕಳಿಸಿ. ನಿಮ್ಮ ಈ ಅಕ್ಷರ ಋಣ ತೀರಿಸಲು 150 ಶಬ್ದಮಿತಿ. ಜೀವನಪ್ರೀತಿ ತುಂಬಿ, ಸ್ಫೂರ್ತಿ ನೀಡಿದವರ ಬಗ್ಗೆ ಬರೆದು ಕಳುಹಿಸಲು ಕೊನೆಯ ದಿನ ನವೆಂಬರ್ 2.
ಇಮೇಲ್— editorsu@sudha.co.in